Reg No. M 129 (Founded 1917) Daily & Weekly

ಸತ್ಯವಾದಿ

(ಅಭಿಮಾನಿ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 189] ಶನಿವಾರ 21—4—45 [3 ಪೈ

ಜರ್ಮನಿಯಿಂದಲಿಬ್ಬನ್‌ಗೆ ರಾಶಿರಾಶಿ ಚಿನ್ನ!

ನಾಜೀ ನಾಯಕರು ರೂಪು ಬದಲಾಯಿಸುವರೇ?

ನಾವು ಹಿಟ್ಲರನ್ನು ಹಿಡಿದಾಗ ನಿಜವಾದ ಹಿಟ್ಲರನ್ನು ಹಿಡಿದಿರುವೆವೇ ಎಂದು ಖಾತ್ರಿ ಸುದ್ದಿ ಇಂದಾಚೆಗೂ, ಮಿತ್ರರ ಹೊಸ ಅಮೆರಿಕನ್ ಬ್ರಿಟಿಷ್ ಸಿ. ಐ. ಡಿ. ಯವರಿಗೂ ಈಗ ಯೋಚಿಸುವರು. ಯುದ್ಧ ಮುಗಿಯುತ್ತಾ ಬಂದಿತು! ಬೆನೇಯೂ ಬೆಟ್ಟಗಳ ನಡುವೆ ನಾಜಿಗಳು ಬಲವಾದ ಹಂಗಾಮಿ ಗಾಟಾರ್‌ಡಾಮ್ಮಿ ರಂಗ್ ಕೋಟೆ ಹತ್ತಿರಕ್ಕೆ ಮಿತ್ರಸೇನೆಯು ನುಗ್ಗುತ್ತಿದೆ.

ಲಂಡನ್ನಿಗೆ ಈಗ ವಾರ್ತೆ ಬಂದಿರುವಂತೆ ಜರ್ಮನಿಯು ನಿಪುಣರಾದ ಪಾಸ್ಟಿಕ್ ಸರ್ಜನ್ನುಗಳು ತಂಡತಂಡವಾಗಿ ಹಿಟ್ಲರನ ಸಹಾಯಕ್ಕೆ ಹೀಗೆ ಬೆರ್ಲಿಯೊಳಗೆ ಹೋಗುತ್ತಿರುವರು. ನಿನಗೆ ಅನುಮಾನವಾಗಬಹುದು. ಹಿಟ್ಲರಿಗೆ ಬಾಂಬು ಬಿದ್ದು ಗಾಯವಾಗಿಹುದೋ ಇಲ್ಲವೋ ಪತ್ತೆಯ ಕಷ್ಟಕ್ಕಾಗಿ ಇವರು ಹಿಂಡುಹಿಂಡಾಗಿ ಹೋಗುತ್ತಿರುವರೆಂದು. ಇವರು ದಶೋಡೆಕೋರರ ಗುಂಪಿಗೆ ಸೇರಿದವರು. ಯು ಎಸ್. ಎ. ದಲ್ಲಿ ಜೈಲಿಗೆ ಹೋದವರ ಉನ್ನತ ಕಾಲದಲ್ಲಿ ಈ ಕಳ್ಳರ ಗುಂಪಿನವರು ರೂಪು ಬದಲಾಯಿಸುವ ಸರ್ಜನ್ನರ ಸಹಾಯದಿಂದ ರೂಪವನ್ನು ಬದಲಾಯಿಸಿ ನಾನಾ ಹೀನ ಕೃತ್ಯ ಮಾಡಿದರು. ಟಿಲ್‌ಟೀಲ್ ಗುರುತುಗಳನ್ನು ಮಾಯಮಾಡಿ ಕೊಂಡ ಬೆರಳುಗಳ ತುದಿ ಬದಲಾವಣೆ ಮಾಡಿಸಿ ಕೊಂಡರು. ಮುಖವನ್ನು ಸಹಾ ಮಾರ್ಪಡಿಸಿಕೊಂಡರು. ಇವರು ಬಹಳ ಕಾಲದವರೆಗೆ ಯಾರ ದೃಷ್ಟಿಗೂ ಬೀಳಲಿಲ್ಲ. ಹಿಟ್ಲರ್ ಈ ರೀತಿ ಮಾಡಿಸಿಕೊಳ್ಳುತ್ತಿರುವುದು ಸಾಧ್ಯ. ಅಲ್ಲದೆ ತನ್ನ ಜಾಗೆ ಇರುವ ಅನೇಕರನ್ನು ಗೊತ್ತುಪಡಿಸಿ ತನ್ನಲ್ಲಿಟ್ಟುಕೊಂಡಿರುವನು.

ಭಂಗಾರದ ರವಾನೆ

ನ್ಯೂಯಾರ್ಕ್ ಏ 17— ಬಾಂಬೊಂದು ವಿಮಾನದಲ್ಲಿ 250000 ಪೌಂಡು ಭಂಗಾರದಂತೆ ಜರ್ಮನಿಯಿಂದ ಲಿಸ್ಬನ್ನಿಗೆ ವಾರವಾರ ಸಾಗಿಸಲಾಗುತ್ತಿದೆ ಎಂದು ವಾಲ್ಟರ್ ವಿಂಚೆಲ್ ವರದಿಮಾಡಿರುವನು.

ಲಕ್ಷ್ಮೀಕಾಂತಂ ಖೂನಿ ಕೇಸು

ಈ ನೆಲಬುದ್ಧಮೆಯಲ್ಲಿ 5 ನೇಅಪರಾಧಿ ಶ್ರೀನಾಮುಲು ನಾಯಿಡುಂವರ ಬಿಡುಗಡೆ ಮಾಡಲ್ಪಟ್ಟರು. ಇವರ ಪರ ಬೊಂಬಾಯಿನ ಶ್ರೀ ಮುನ್ಷಿಯವರು ವಕಾಲತ್ ನಡೆಸಿದರು.

ನಾಜಿಗಳಿಗೆ ಆಸರೆಗೆ ಸೊನ್ನೆ

ಸ್ವಿಡ್ಜರ್ಲೆಂಡಿಗೆ ಜರ್ಮನಿಯಿಂದ ಆಸರೆಗೆ ಬರುವವರು ಹೆಚ್ಚುವರೆಂದು ಸ್ವಿಸ್ ವಾಯವ್ಯ ಗಡಿ ಬಂದುಮಾಡಲಾಗಿದೆ.

ಭಾರತದ ಬಟ್ಟೆ ಹೊರಕ್ಕೆ

ಭಾರತ ಸರ್ಕಾರದವರು ಸುಮಾರು ೩೭೦೦೦೦ ಗಜಗಳಷ್ಟು ಬಟ್ಟೆಯನ್ನು ಸೌದಿ ಅರೇಬಿಯಾದಲ್ಲಿ ಜೆದ್ದಾಕ್ಕೆ ಕಳುಹಿಸಿರುವರೆಂದು ತಿಳಿಯುತ್ತದೆ. ಅಲ್ಲಿ ಬಟ್ಟೆ ವಸ್ತ್ರ ಅನ್ನ ಎರಡೂವರ ಕೊರತೆಯಿರುವುದಂತೆ.

ಮತ್ತೆ ಸ್ವಾಲಿನ್ನಿನ ಒತ್ತಾಯ

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಲೂಬ್ಲಿನ್ ಸರ್ಕಾರದ ಪ್ರತಿನಿಧಿಗೆ ಅವಕಾಶ ಕೊಡಬೇಕೆಂದು ಸ್ವಾಲಿನ್ನರು ಮತ್ತೊಮ್ಮೆ ಒತ್ತಾಯಮಾಡಿರುವರು.

ಸೈನಿಕರ ಉಪಯೋಗಕ್ಕೆ

ಯೂರೋಪಿನಲ್ಲಿರುವ ಅಮೇರಿಕನ್ ಸೈನ್ಯಗಳ ಉಪಯೋಗಕ್ಕಾಗಿ ನ್ಯೂಯಾರ್ಕ್ ಮತ್ತು ವಾಷಿಂಗ್ಟನ್ ಪಟ್ಟಣಗಳಿಂದ ಪ್ರತಿದಿವಸವೂ 1200 ಪೈಂಯಿಂಟ್ ಮನುಷ್ಯ ರಕ್ತವನ್ನು ವಿಮಾನಗಳಲ್ಲಿ ಸಾಗಿಸಿ ರಣರಂಗದ ಆಸ್ಪತ್ರೆಗಳಲ್ಲಿ ಉಪಯೋಗಿಸುವದು.

ನಾಜಿಗಳ ಅಮಾನುಷ ಕೃತ್ಯ

ಲೀಪ್‌ಜಿಗ್‌ನ್ನು ಅಮೇರಿಕನ್ನರು ಪ್ರವೇಶಿಸುವುದಕ್ಕೆ ಮುಂಚೆ ಅಲ್ಲಿಯ ಮುದ್ದಿನ ಕಾರ್ಖಾನೆಯಲ್ಲಿದ್ದ 200 ಮಂದಿ ರಷ್ಯಾ, ಪೋಲಿಷ್ ಮತ್ತು ಫ್ರೆಂಚ್ ಗುಲಾಮು-ಕೆಲಸಗಾರರನ್ನು ಜರ್ಮನರು ಸುಟ್ಟು ಹಾಕಿದರು.

ಅಶೋಕಾಷ್ಟಮಿ ಸ್ನಾನ

ತಾ || 19 ರಲ್ಲಿ ಉರಿಂಗ್ಲೆನಾಂಡ್ ಹತ್ತಿರ ಬ್ರಹ್ಮಪುದಿತ್ರಾ ನದಿಯಲ್ಲಿ ಭಾರತದ ಅನೇಕ ಕಡೆಗಳಿಂದ ಲಕ್ಷಾಂತರ ಮಂದ ಯಾತ್ರಿಕರು ಅಶೋಕಾಷ್ಟಮಿ ಸ್ನಾನವನ್ನು ಮಾಡಿದರು.

ನಾಜೀ ವಿಚಿತ್ರ ಆಜ್ಞೆಗಳು

ವಾಪಸಾಗುತ್ತಿರುವ ನಾಜೀ ಮುಖಂಡರು ಕೊಡುತ್ತಿರುವ ಆಜ್ಞೆಗಳು ವಿಚಿತ್ರವಾಗಿವೆ. ಹಿಟ್ಲರಿನ ಯುವಕ ಪಡೆಯವರು, ತಮ್ಮ ತಂದೆತಾಯಿಗಳೇ ಆದರೂ ಶ್ವೇತ ಪತಾಕೆಯನ್ನೆತ್ತಿ ಶರಣಾಗತರಾಗಲು ಹೊರಟರೆ ಅವರನ್ನೂ ಕೊಂದುಹಾಕಿಬಿಡಬೇಕಂತೆ. ಬ್ರೆಡ್ ತಯಾರ್ಮಾಡುವವರೆಲ್ಲರೂ ತಮ್ಮ ಅಂಗಡಿಯ ಎಲ್ಲಾ ಸಾಮಗ್ರಿಗಳನ್ನು ನಾಶ ಪಡಿಸಬೇಕಂತೆ.

ಪೌರಸಭಾ ವಿಾಟಂಗು

ರಾಜಧಾನಿಯ ಪೌರಸಭೆಯ ಸಾಧಾರಣ ವಿಾಟಂಗು ಈ ತಿಂಗಳು 27 ನೇ ತಾರೀಖಿನ ನಡೆಯುವುದು.

ಸೌದಿ ಅಭಿವೃದ್ಧಿಮತ್ತು ಅದನ್ನು ಸರಿಪಡಿಸುವ ಬಗ್ಗೆ ವಿಶೇಷ ವಿಾಟಂಗು ತಾ || 24 ರಲ್ಲಿ ನಡೆಯುವುದು.

ಟ್ರಸ್ಟ್ ಬೋರ್ಡು ವಿಾಟಂಗು

ರಾಜಧಾನಿಯ ಟ್ರಸ್ಟ್ ಬೋರ್ಡು ವಿಾಟಂಗು ಈ ತಿಂಗಳು ತಾ || 25 ನೇ ಬುಧವಾರ ನಡೆಯುವುದು.

ವೃತ್ತಾಂತ ಸಂಗ್ರಹ

ರಷ್ಯನ್ನರು ಬರ್ಲಿನ್ನಿಗೆ 10 ಮೈಲಿ ಹತ್ತಿರಕ್ಕೆ ಬಂದಿದ್ದಾರೆ.

o o

ಇಟಲಿಯಲ್ಲಿ ಭಾರತ ಸೈನ್ಯವು ಮೆಡಿಸಿನ ನಗರವನ್ನು ಹಿಡಿದಿದೆ.

o o

ಸ್ಟಾಲಿನ್ನಿನ ಮಗನು ಜರ್ಮನ್ ಯುದ್ಧ ಖೈದಿಯಾಗಿದ್ದನು ಈಗ ಸ್ವದೇಶಕ್ಕೆ ಹಿಂದಿರುಗಿದನು.

o o

ಲೆನ್ಸಬಳಿ ಜರ್ಮನರು ತಯಾರು ಮಾಡುತ್ತಿದ್ದ 'ವಿಷವಾಯು' ಕಾರ್ಖಾನೆಯನ್ನು ಮಿತ್ರಸೇನೆ ಹತ್ತಿರ ಹಚ್ಚಿದೆ.

o o

ನಾಜಿಗಳು 3 ನೇ ಯುದ್ಧ ಪ್ರಾರಂಭಿಸಲು ಸ್ಪೇನಿನಲ್ಲಿ ಪ್ರಯತ್ನಿಸುತ್ತಿರುವರೆಂದು ಸುದ್ದಿ.

o o

ಗಾಂಧೀಜಿಯವರು ರೂಸ್ವೆಲ್ಟರ ಮರಣವನ್ನು ಕುರಿತು ಭಾರತದ ದೊಡ್ಡ ಸ್ನೇಹಿತನೊಬ್ಬನು ಕಣ್ಮರೆಯಾದನೆಂದು ಹೇಳಿರುವರು.

o o

ಜರ್ಮನಿಯ 35 ದೊಡ್ಡ ಪಟ್ಟಣಗಳಲ್ಲಿ ಈಗ 19 ಮಿತ್ರರ ವಶವಾಗಿವೆ.

o o

ಜರ್ಮನಿಯಲ್ಲಿ ರಷ್ಯಾ ಸೇನೆ ಮತ್ತು ಅಮೇರಿಕ ಸೇನೆ ಒಂದುಗೂಡಲು ಇನ್ನೂ 40 ಮೈಲಿ ಫಾಸಲೆ ಇದೆ.

o o

ಲಾರ್ಡ್ ವೇವಲ್ಲರಿಗೆ ಜರ್ಮನಿಯಲ್ಲಿ ಬ್ರಿಟಿಷ್ ಪರ ಮಿಲಿಟರಿ ಅಧಿಕಾರ ಕೊಡುವುದಾಗಿದೆ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಅಮೇರಿಕ ಯುದ್ಧ ಆಸ್ಪತ್ರೆಗೆ ಜರ್ಮನಿಯ ಗಾಯಗೊಂಡವರನ್ನು ಕರೆದು ಕೊಂಡು ಬರುತ್ತಿರುವ ಚಿತ್ರವಿದು

ಶುದ್ಧವಾದುದೆಂದು ಗ್ಯಾರಂಟಿ ಯೂಪ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಕ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಸರ್ವಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮಾರುವರು. ಮತ್ತು —

ವಲ್ಲಭದಾಸ್ ತೇಜ್‌ಪಾಲ್ ಹಿಂಗು, ಕೇಸರಿ, ಪಿಚ್ಚಕರ್ಪೂರ ವರ್ತಕರು

14 ಗೋವಿಂದಪ್ಪ ನಾಯಿಕ್ ಬೀದಿ ಜಿ.ಟಿ. ಮದ್ರಾಸ್.



ಐ.ಜೆ. ಹಾಲ್, ಸರಾಫ್ ಅಂಗಡಿ ರವೇ ಬೀದಿ, ಮೈಸೂರು

From 20-4-45
At Ranjit

Police

ಪ್ರೇಂ ಆದಿಬ್ — ರತ್ನಮಾಲಾ
ರಂಜಿತ್ — ಜೀವಕ್
ಮುಂತಾದವರು ಪಾತ್ರವಹಿಸಿರುವ

ಪೊಲೀಸ್

(ಹಿಂದಿ)

ಪ್ರತಿ ದಿನ 3 ಆಟಗಳು
ತಾ || 21-22 ಬೆಳಗಿನ ಪ್ರದರ್ಶನ
ಅಂಪ್ ಮಿಚೌಲಿ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ವಿವಿಧ ವರ್ತಮಾನ

ಜಪಾನ್‌ದಲ್ಲಿ ಪುನರ್ರಚನೆ ಮಾಡುತ್ತಿರುವರಷ್ಟೆ. ಅಲ್ಲಿ ನಾಜಿಗಳನ್ನು ಕೆಲಸಗಾರರನ್ನಾಗಿ ಮಾಡಿಕೊಂಡಿರುವರು.

ಸ್ಪೇನಿನಲ್ಲಿ ಇನ್ನು ಮುಂದೆ ಸೆಕ್ಕರಿನ್ ತೆಗೆದು ಹಾಕಿಲ್ಲಾಗಿದೆ. ಯಾರು ಬೇಕಾದರೂ ಸ್ಪೇನಿನಿಂದ ಧಾರಾಳವಾಗಿ ಖಾತ್ಮಿಗಳನ್ನು ಕಳಿಸಬಹುದು.

ಪಾಟ್ನಾದಲ್ಲಿ ಒಬ್ಬ ಸರ್ಕಾರಿ ಅಧಿಕಾರಿಯು ಪಂಚೆಯ ಅಭಾವದಿಂದ ಸೀರೆಯನ್ನು ಉಟ್ಟುಕೊಂಡು ಬಂದೆನೆಂದು ಕೇಳಿ ಅಲ್ಲಿದ್ದವರಿಗೆಲ್ಲಾ ಆಶ್ಚರ್ಯವನ್ನುಂಟು ಮಾಡಿದನು.

ಮಧುರೆಯಲ್ಲಿ ಎಸ್ಕೈಕ್ ಆಸ್ಪತ್ರೆಯಲ್ಲಿ ಒಬ್ಬ ಹೆಂಗಸು ಎರಡು ತಲೆಯ ಮಗುವನ್ನು ಹೆತ್ತಳು. ಕೂಡಿಗೆ 2 ಕೈ 2 ಕಾಲು ಇವೆ. ಮತ್ತೊಂದು ಕಾಲು ಇವೆ.

ಮತ್ತೊಂದು ಕಾಲು ಬಾಲದಹಾಗೆ ಚಿಕ್ಕದಾಗಿದೆ. ತಾಯಿಗೆ ಇದು ಚೊಚ್ಚಲು ಮಗು. ಈ ಜನನವಾದ ಕೂಡಲೇ ಮಗುವು ಪ್ರಾಣಬಿಟ್ಟಿತು. ಆಸ್ಪತ್ರೆಯಲ್ಲಿ ಇದನ್ನು ದೃತಿಯಲ್ಲಿ ಇಟ್ಟಿರುವರು. ಇದನ್ನು ನೋಡಲು ಜನರು ಆಸ್ಪತ್ರೆಗೆ ತಂಡತಂಡವಾಗಿ ಭರುತ್ತಿರುವರು.

ಅಂತ್ಯದ ವರೆವಿಗೂ ಯುದ್ಧ ನಡೆಸುವ ಸಲುವಾಗಿ ಹಿಮ್ಲರ್‌ನು ಹ್ಯಾಂಬರ್ಗ ಮತ್ತು ಬ್ರೆಮ್ಮಿಗೂ ಬಂದಿದ್ದನೆಂದೂ, ಅಲ್ಲಿ ಸವ್ಯವಸ್ಥೆ ಮಾಡಿರುವುನೆಂದೂ ತಿಳಿಯಬಂದಿದೆ.

ನಾಜಿ ಗೆಸ್ಟಾಪೋ ಪಡೆಗಳು ಮ್ಯಾನಿಕ್ಕಿನಲ್ಲಿ ಜರ್ಮನ್ ಸೇನಿಕರಿಂದ ಸ್ಫೋರಿಪಿಸಲ್ಪಟ್ಟಿದ್ದ ದಂಗೆಯೊಂದನ್ನು ಅಡಗಿಸಿದರೆಂದೂ ಹಲ ಕೆಲವು ಸಾವು ನೋವುಗಳುಂಟಾದುವೆಂದೂ ಗೊತ್ತಾಗಿದೆ.

AT OPERA — 2 ನೇ ವಾರ
POOMPAVAI

'ಪೂಂಪಾವೆ'

ಪಾತ್ರ - ರಾಮಸ್ವಾಮಿ, ಜೀವರತ್ನಂ, ಮಧುರಂ, ಕೃಷ್ಣ

Morning Shows, From 20—4—45 "BELLE STARR"